ಓ.ಎಸ್.ನಂ.232/2023

ಡಿ ಡಬ್ಲ್ಯೂಃ 1

ದಿನಾಂಕ 11.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ಯಾರಾ 26 ರಲ್ಲಿ ತೋರಿಸಿರುವ ರಸ್ತೆ ಅಸ್ತಿತ್ವದಲ್ಲಿ ಇರುವುದಿಲ್ಲ ಹಾಗೂ ದಾವಾ ರಸ್ತೆ ಮಾತ್ರ ವಾದಿಯರ ಬಳಕೆಗೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಗೂಗಲ್ ನಕಾಶೆ ಕಾಣಿಸುವ ಪೋಟೋಗಳಲ್ಲಿ ಸೀಲ್ ಮತ್ತು ಸಹಿ ಇರುವುದಿಲ್ಲ. ನಮ್ಮ ಮತ್ತು ಧರ್ಮಪ್ಪ ಅಮಾತಿ ನಡುವೆ ಜಗಳ ಆಗಿದ್ದು, ಆ ಕುರಿತು ಯಾವುದೇ ದಾಖಲೆಗಳು ಹಾಗೂ ಫಿರ್ಯಾದಿ ಇರುವುದಿಲ್ಲ. ವಾದಿಗಳು ಜೆಸಿಬಿ ಮೂಲಕ ನಮ್ಮ ಮನೆ ಗೋಡೆ ಕೆಡುವುತ್ತೇವೆ ಎಂದು ಹೇಳಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

**2.** ದಿನಾಂಕಃ 30.07.2023 ರಂದು ವಾದಿಗಳು ಓಡಾಡುತ್ತಿದ್ದಾಗ ರಸ್ತೆಗೆ ಮುಳ್ಳು ಹಾಕಿದ ಕಾರಣ ಪ್ರಶ್ನೆ ಮಾಡಿದ್ದು, ಸದರಿ ವಿಷಯವನ್ನು ದುರುದ್ದೇಶಪೂರ್ವಕವಾಗಿ ಪೊಲೀಸ ಠಾಣೆಗೆ ಹೋಗಿ ಫಿರ್ಯಾದಿ ನೀಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮನೆಗೆ ಸಿಸಿ ಕ್ಯಾಮೆರಾ ವ್ಯವಸ್ಥೆ ಇರುತ್ತದೆ ಎಂದರೆ ಸರಿ. ವಾದಿಗಳು ನಮ್ಮ ಮನೆಗೆ ಜಗಳಕ್ಕೆ ಬಂದಿರುವ ವಿಷಯದ ಕುರಿತು ಸದರಿ ಸಿಸಿ ಕ್ಯಾಮೆರಾ ಪೂಟೇಜ್ ಹಾಕಿರುವುದಿಲ್ಲ. ದಿನಾಂಕಃ 01.08.2023 ರಂದು ಹಲಗೇರಿ ಪೊಲೀಸ್ ಠಾಣೆಗೆ ನಮ್ಮನ್ನು ಮತ್ತು ವಾದಿಯರನ್ನು ಕರೆಸಿರುತ್ತಾರೆ.

**3.** ಗ್ರಾಮ ನಕಾಶೆಯ ರಸ್ತೆಯಲ್ಲಿ ಓಡಾಡುವಂತೆ ಹೇಳುವ ಅಧಿಕಾರ ಪೊಲೀಸರಿಗೆ ಇಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಯಾರ ರಾಜಕೀಯ ಬೆಂಬಲ ಇದೆ ಎಂದು ನನಗೆ ಗೊತ್ತಿಲ್ಲ. ದಿನಾಂಕಃ 01.08.2023 ರಂದು ವಾದಿಯರು ಈ ದಾವೆ ಹೂಡಲು ನ್ಯಾಯಾಲಯದಲ್ಲಿ ಹಾಜರಿದ್ದು, ಪೊಲೀಸ ಠಾಣೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂಬರಃ 34 ರಿಂದ 36 ರಲ್ಲಿ ಕಾಣಿಸಿರುವ ಆಸ್ತಿಗಳ ಚೆಕ್ಕಬಂದಿ ಸುಳ್ಳಿನಿಂದ ಕೂಡಿದ್ದು, ಈ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

**4.** ನಮ್ಮ ಪ್ರತಿವಾದ ಪತ್ರದ ಜೊತೆ ಹಾಜರುಪಡಿಸಿರುವ ಹಾತ ನಕಾಶೆ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂಬರಃ 150/6 ಮತ್ತು 150/7 ರ ಆಸ್ತಿಗಳು ಅಮಾತಿ ಕುಟುಂಬದ ಆಸ್ತಿಗಳಾಗಿರುತ್ತವೆ. ನಿಡಿ-12 ರಿಂದ 15 ವರೆಗೆ ಹಾಜರುಪಡಿಸಿರುವ ಪೋಟೋಗಳು ದಾವಾ ರಸ್ತೆಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-12 ರಲ್ಲಿ ಕಾಣಿಸುವ ರಸ್ತೆಯನ್ನು ವಾದಿಗಳೇ ಮುಚ್ಚಿರುತ್ತಾರೆ. ಸದರಿ ರಸ್ತೆಯು ವಾದಿಗಳಿಗೆ ಸಂಬಂಧಿಸಿರದ ಕಾರಣ ಅವರುಗಳು ಮುಚ್ಚಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-16 ರಿಂದ 41, 65 ರಿಂದ 96

ರ ಪೋಟೋಗಳು ವಾದಿಗಳ ಆಸ್ತಿಗೆ ಸಂಬಂಧಿಸಿರುತ್ತವೆ ಎಂದರೆ ಸರಿ. ಆ ಸಮಯದಲ್ಲಿ ಪಕ್ಕದ ಜಮೀನಿನವರ ಬಳಿ ಈ ದಾವೆ ಪೂರ್ಣಗೊಳ್ಳುವವರೆಗೂ ಓಡಾಡಿಕೊಳ್ಳಲು ಮನವಿ ಮಾಡಿಕೊಂಡು ಬಳಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**5.** ಸಾಕ್ಷಿಗೆ ನಿಡಿ-42ರ ಪೋಟೋವನ್ನು ತೋರಿಸಿ, ತನ್ನ ಮನೆ ಇರುವ ಭಾಗವನ್ನು ಕೇಳಿದ್ದು ಸಾಕ್ಷಿಯು ಸದರಿ ಭಾಗವನ್ನು ನೋಡಿ ಗುರುತಿಸಿದ್ದು ಸದರಿ ಮನೆ ಇರುವ ಭಾಗವನ್ನು ನಿಡಿ-42(ಎ) ಎಂದು ಗುರುತಿಸಲಾಯಿತು. ಸದರಿ ಮನೆಗೆ ಹೊಂದಿಕೊಂಡು ಉತ್ತರಕ್ಕೆ ರಸ್ತೆಯಿಂದ ನಮ್ಮ ಆಸ್ತಿಯ ಅಂಚಿನವರೆಗೆ ರಸ್ತೆ ಇರುವುದು ಕಾಣಿಸುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆಯು ಪಶ್ಚಿಮಕ್ಕೆ ತಿರುಗಿ ವಾದಿಯರ ಆಸ್ತಿಗೆ ಹೋಗುತ್ತದೆ ಎಂದರೆ ಸರಿಯಲ್ಲ.

**6.** ನಿಪಿ-16 ಮತ್ತು 17 ಮತ್ತು ನಿಡಿ-52ರಲ್ಲಿ ಕಾಣಿಸುವ ಮನೆಯು ನಮ್ಮ ರೇಷ್ಮೆ ಮನೆಯಾಗಿರುತ್ತದೆ. ಸದರಿ ಪೋಟೋಗಳಲ್ಲಿ ಈ ದಾವೆ ಹೂಡಿದ ನಂತರ ತೆಂಗಿನ ಗಿಡಗಳನ್ನು ನೆಟ್ಟಿರುವುದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ಸದರಿ ನಿಪಿ-16 ಮತ್ತು 17ನೇ ಪೋಟೋಗಳಲ್ಲಿ ದಾವಾ ರಸ್ತೆ ಕಾಣಿಸುತ್ತದೆ ಎಂದರೆ ಸರಿಯಲ್ಲ. ಆ ರೀತಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಪೋಟೋಗಳನ್ನು ಎಡಿಟ್ ಮಾಡಿರುವುದಾಗಿ ನುಡಿಯುತ್ತಾರೆ.

**7.** ನಿಡಿ-52ರಲ್ಲಿ ಕಾಣಿಸುವ ಪೋಟೋದಲ್ಲಿ ಟಿಸಿ ಪಕ್ಕ ರಸ್ತೆ ಇದೆ ಎಂದರೆ ಸರಿಯಲ್ಲ. ನಿಪಿ-14ರಲ್ಲಿ ಕಾಣಿಸುವಂತೆ ಮಾಗೋಡು ರಸ್ತೆಯಿಂದ ನಮ್ಮ ಆಸ್ತಿಗೆ ಬರುವ ರಸ್ತೆ ಕಾಣಿಸುತ್ತಿದೆ ಎಂದರೆ ಸರಿಯಲ್ಲ. ನಿಡಿ-46 ರಿಂದ 51 ರ ಪೋಟೋಗಳು ವಾದಿ ಜಮೀನಿಗೆ ಸಂಬಂಧಿಸಿದ ಪೋಟೋಗಳಲ್ಲ ಎಂದರೆ ಸರಿಯಲ್ಲ. ನಿಪಿ-21ರಲ್ಲಿ ಕಾಣಿಸುವ ರಸ್ತೆಯು ವಾದಿಯರ ಜಮೀನಿನ ಉತ್ತರ ಭಾಗಕ್ಕೆ ಇರುವ ರಸ್ತೆ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-20ರಲ್ಲಿ ಕಾಣಿಸುವ ಪೋಟೋದ ಆಸ್ತಿಯು ನಮ್ಮ ಆಸ್ತಿಯ ಪಶ್ಚಿಮ ಭಾಗ ಎಂದರೆ ಸರಿಯಲ್ಲ. ಆ ರೀತಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**8.** ಅಮಾತಿ ಕುಟುಂಬದವರು ವಾದಿಯರಿಗೆ ಸಂಬಂಧಿಗಳಲ್ಲ ಎಂದರೆ ಸರಿ. ಚಂದ್ರಪ್ಪ ಅಮಾತಿಯವರು ತಮ್ಮ ಆಸ್ತಿಯಲ್ಲಿರುವ ರಸ್ತೆಯಲ್ಲಿ ಹರಕತ್ತು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆತನ ಆಸ್ತಿಯಲ್ಲಿ ವಾದಿಗಳಿಗೆ ಯಾವುದೇ ರಸ್ತೆ ಮಾರ್ಗ ಇಲ್ಲದ ಕಾರಣ ನಮ್ಮ ಆಸ್ತಿಯಲ್ಲಿ ದಾವಾ ರಸ್ತೆ ಕುರಿತು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ಹೂಡಿದ ನಂತರ ನಮ್ಮ ಆಸ್ತಿಯು ಉತ್ತರ ಮತ್ತು ಪೂರ್ವ ಭಾಗಕ್ಕೆ ಗೇಟ್ ಅಳವಡಿಸಿರುತ್ತೇವೆ ಎಂದರೆ ಸಾಕ್ಷಿಯು ಆ ಪೂರ್ವದಲ್ಲೇ ಅಳವಡಿಸಿರುವುದಾಗಿ ನುಡಿಯುತ್ತಾರೆ. ಸಾಕ್ಷಿಗೆ ನಿಡಿ-52ರ ಪೋಟೋವನ್ನು ತೋರಿಸಿ ಸದರಿ ಪೋಟೋದಲ್ಲಿ ಗೇಟ್ ಕಾಣಿಸುವುದಿಲ್ಲ ಎಂದರೆ ಸಾಕ್ಷಿಯು ಸದರಿ ಪೋಟೋ ಸುಳ್ಳಿನಿಂದ ಕೂಡಿರುವುದಾಗಿ ನುಡಿಯುತ್ತಾರೆ. ನಿಪಿ-14 ರಿಂದ 19ರಲ್ಲಿ ಕಾಣಿಸಿರುವ ರಸ್ತೆಯು

ದಾವಾ ರಸ್ತೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ವಾದಿಗಳ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಫೋಟೋ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ರಸ್ತೆ ಅಸ್ತಿತ್ವದಲ್ಲಿದ್ದರೂ ಸಹ ನಾನು ರಸ್ತೆ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ನನ್ನ ಸಮಕ್ಷಮ

Sd/-

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.